KACN020014852025

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ,**

**ಚಾಮರಾಜನಗರ.**

ದಿನಾಂಕಃ 27ನೇ ಜೂನ್ ಮಾಹೆ 2026

**ಉಪಸ್ಥಿತರು**

**ಶ್ರೀ ಪ್ರಕಾಶ್ .ಸಿ.ಡಿ, ಬಿ.ಎ. ಎಲ್ ಎಲ್. ಬಿ.,**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಸಿ.ಜೆ.ಎಂ. ಚಾಮರಾಜನಗರ.**

**ಸಿ.ಸಿ. ನಂ. 664/2025**

**ಫಿರ್ಯಾದುದಾರರು :** **ರಾಜ್ಯದ ಪರವಾಗಿ ಗ್ರಾಮಾಂತರ ಪೊಲೀಸ್ ಠಾಣೆ, ಚಾಮರಾಜನಗರ.**
(ಪ್ರತಿನಿಧಿಸುವವರು ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

**ಆರೋಪಿತರು :** ಎ1. **ಶಿವಣ್ಣ**
ಬಿನ್ ಕಾಳೇಗೌಡ
ವಯಸ್ಸು 55 ವರ್ಷ

**ಎ2. ಪುಟ್ಟಮಾದಮ್ಮ ಅಃ ಪುಟ್ಟಮಲ್ಲಮ್ಮ**
ಕೋಂ ಶಿವಣ್ಣ
ವಯಸ್ಸು 50 ವರ್ಷ

**ಎ3. ಮಹೇಶ**
ಬಿನ್ ಶಿವಣ್ಣ
ವಯಸ್ಸು 31 ವರ್ಷ
ಎಲ್ಲರು ವಾಸಃ ಮುತ್ತಿಗೆ ಗ್ರಾಮ,
ಚಾಮರಾಜನಗರ ತಾಲ್ಲೂಕು.
**(ಪರವಾಗಿ,ಶ್ರೀ.ಎ.ಎಸ್.ವಿ., ವಕೀಲರು)**

**: ಘಟನೆಗಳ ವಿವರ :**

| | | |
|---|---|---|
| ಪ್ರಕರಣ ದಾಖಲಾದ ದಿನಾಂಕ | : | 10.09.2025 |
| ಪ್ರಕರಣದ ಸ್ವರೂಪ | : | ಭಾ. ದಂ. ಸಂ. ಕಲಂ. 504, 324, 323 ಸಹವಾಚಕ ಕಲಂ.34 |
| ವಿಚಾರಣೆ ಪ್ರಾರಂಭವಾದ ದಿನಾಂಕ | : | 03.06.2026 |
| ವಿಚಾರಣೆ ಮುಕ್ತಾಯವಾದ ದಿನಾಂಕ | : | 03.06.2026 |
| ತೀರ್ಪು ನೀಡಿದ ದಿನಾಂಕ | : | **27.06.2026** |
| ಪ್ರಕರಣದ ಒಟ್ಟು ಕಾಲಾವಧಿ | : | ವರ್ಷ – ತಿಂಗಳು 9 ದಿನ 18 |

**(ಪ್ರಕಾಶ್ ಸಿ.ಡಿ )**
**ಪ್ರಧಾನ ಹಿರಿಯ ಸಿವಿಲ್ ಜಡ್ಜ್**
**ಮತ್ತು ಸಿ ಜೆ ಎಂ. ಚಾಮರಾಜನಗರ**

# ತೀರ್ಪು

ಆರಕ್ಷಕ ನಿರೀಕ್ಷಕರು, ಗ್ರಾಮಾಂತರ ಆರಕ್ಷಕ ಠಾಣೆ, ಚಾಮರಾಜನಗರ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.504, 324, 323 ಸಹವಾಚಕ ಕಲಂ.34 ರಡಿಯಲ್ಲಿ ದೋಷರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿರುತ್ತದೆ.**

ದಿನಾಂಕ: 19-08-2023 ರಂದು ಮಧ್ಯಾಹ್ನ 12-00 ಗಂಟೆ ಸಮಯದಲ್ಲಿ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ್ದು, ಚಾಮರಾಜನಗರ ತಾಲ್ಲೂಕು, ಮುತ್ತಿಗೆ ಗ್ರಾಮದ ಸಾಕ್ಷಿ-02 ರವರ ಜಮೀನಿನ ಹತ್ತಿರ ಹಾದುಹೋಗಿರುವ ಬೀರೇಶ್ವರ ದೇವಸ್ಥಾನದ ರಸ್ತೆಯಲ್ಲಿ ಆರೋಪಿ-01 ರವರು ಮೈಕೆ ಮತ್ತು ಕುರಿಗಳನ್ನು ಸಾಕ್ಷಿ-02 ರವರ ಜಮೀನಿನ ಬಳಿ ಮೇಯಿಸುತ್ತಿದ್ದಾಗ, ಸಾಕ್ಷಿ-02 ರವರು ಯಾಕೇ ಕುರಿ ಮತ್ತು ಮೇಕೆಗಳನ್ನು ನಮ್ಮ ಜಮೀನಿನ ಬಳಿ ಮೇಯಿಸುತ್ತಿಯಾ ಇದರಿಂದ ನಮಗೆ ತೊಂದರೆಯಾಗುವುದಿಲ್ಲವೆ ಎಂದು ಕೇಳಿದಾಗ ಆರೋಪಿ-01 ರವರು ಬೋಳಿ ಮಗನೇ ಸೂಳೇ ಮಗನೇ ಎಂದು ಹಾಗೂ ಅಷ್ಟಕ್ಕೆ ಅಲ್ಲೆ ಇದ್ದ ಆರೋಪಿ-02 ಮತ್ತು 03 ಅವಾಚ್ಯ ಶಬ್ದಗಳಿಂದ ಬೈದ್ದು, 1ನೇ ಆರೋಪಿಯು ಒಂದು ದೊಣ್ಣೆಯಿಂದ ಸಾಕ್ಷಿ-02 ರವರ ಕತ್ತಿನ ಹಿಂಭಾಗಕ್ಕೆ ಹಾಗೂ ಎದೆಗೆ ದೊಣ್ಣೆಯಿಂದ ಹೊಡೆದಾಗ ನೆಲದ ಮೇಲೆ ಬಿದ್ದ ಸಾಕ್ಷಿ-2 ರವರನ್ನು 3ನೇ ಆರೋಪಿಯು ರವರು ಕಾಲಿನಿಂದ ಸಾಕ್ಷಿ-2 ರವರ ಎದೆಗೆ ತುಳಿದು

ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 504, 324, 323 ಸಹವಾಚಕ ಕಲಂ.34 ರಡಿಯಲ್ಲಿ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 99/2023 ರಲ್ಲಿ ಪ್ರಕರಣ ನೊಂದಾಯಿಸಲ್ಪಟ್ಟಿರುತ್ತದೆ.

**3.** ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿದ್ದು, ಆರೋಪಿಗಳಿಗೆ ದೋಷರೋಪಣಾ ಪತ್ರದ ಪ್ರತಿಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಡಿ ಒದಗಿಸಲಾಯಿತು. ನಂತರ ನ್ಯಾಯಾಲಯವು ಆರೋಪಿತರ ಮೇಲಿರುವ ಅಪರಾಧಗಳಿಗೆ ದೋಷರೋಪಣೆ ರಚಿಸಿ, ದೋಷರೋಪಣೆಯ ಅಂಶಗಳನ್ನು ಓದಿ ಹೇಳಿದಾಗ, ಆರೋಪಿಗಳು ತಮ್ಮ ಮೇಲಿರುವ ದೋಷರೋಪಣೆ ಅಂಶಗಳನ್ನು ಅಲ್ಲಗಳೆಯುತ್ತಾರೆ. ಅಭಿಯೋಜನೆಗೆ ಸಾಕ್ಷಿ ವಿಚಾರಣೆ ಮಾಡಲೂ ಅನುವು ಮಾಡಿಕೊಡಲಾಯಿತು.

**4.** ಅಭಿಯೋಜನೆಯವರು ತಮ್ಮ ಪರ ಪ್ರಾಸಾ-1 ರವರನ್ನು ವಿಚಾರಣೆ ಮಾಡಿಕೊಂಡು, ದೂರು ಮತ್ತು ಮಹಜರ್ ನ್ನು ನಿಪಿ-1 ಮತ್ತು 2ನ್ನು ನಿಶಾನೆಗಳನ್ನಾಗಿ ಗುರ್ತಿಸಿಕೊಂಡಿರುತ್ತಾರೆ. ಆರೋಪಿಗಳ ಪರವಾಗಿ ಯಾವುದೇ ದಾಖಲೆ ಗುರುತು ಮಾಡಲಿಲ್ಲ, ಆರೋಪಿಗಳ ಪರ ಯಾವುದೇ ಸಾಕ್ಷಿ ವಿಚಾರಣೆ ಮಾಡಲಿಲ್ಲ, ಆರೋಪಿಗಳ

ಮೇಲೆ ಯಾವುದೇ ಸಾಕ್ಷಿಗಳು ಇಲ್ಲದಿರುವುದರಿಂದ 313 ರ ಹೇಳಿಕೆಯನ್ನು ಬರೆದುಕೊಳ್ಳಲಿಲ್ಲ, 313 ರ ಹೇಳಿಕೆಯನ್ನ ಕೈ ಬಿಡಲಾಯಿತು.

**5.** ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿಗಳ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು.

**6.** ನ್ಯಾಯಾಲಯದ ಗಣನೆಗೆ ಬರುವ ಅಂಶಗಳೆನೆಂದರೆ,

(1) ದಿನಾಂಕ: 19-08-2023 ರಂದು ಮಧ್ಯಾಹ್ನ 12-00 ಗಂಟೆ ಸಮಯದಲ್ಲಿ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ್ದು, ಚಾಮರಾಜನಗರ ತಾಲ್ಲೂಕು, ಮುತ್ತಿಗೆ ಗ್ರಾಮದ ಸಾಕ್ಷಿ-02 ರವರ ಜಮೀನಿನ ಹತ್ತಿರ ಹಾದುಹೋಗಿರುವ ಬೀರೇಶ್ವರ ದೇವಸ್ಥಾನದ ರಸ್ತೆಯಲ್ಲಿ ಆರೋಪಿ-01 ರವರು ಮೈಕೆ ಮತ್ತು ಕುರಿಗಳನ್ನು ಸಾಕ್ಷಿ-02 ರವರ ಜಮೀನಿನ ಬಳಿ ಮೇಯಿಸುತ್ತಿದ್ದಾಗ, ಸಾಕ್ಷಿ-02 ರವರು ಯಾಕೇ ಕುರಿ ಮತ್ತು ಮೇಕೆಗಳನ್ನು ನಮ್ಮ ಜಮೀನಿನ ಬಳಿ ಮೇಯಿಸುತ್ತಿಯಾ ಇದರಿಂದ ನಮಗೆ ತೊಂದರೆಯಾಗುವುದಿಲ್ಲವೆ ಎಂದು ಕೇಳಿದಾಗ ಆರೋಪಿ-01 ರವರು ಬೋಳಿ ಮಗನೇ ಸೂಳೇ ಮಗನೇ ಎಂದು ಹಾಗೂ ಆರೋಪಿ-02 ಮತ್ತು 3 ರವರು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರಡಿಯಲ್ಲಿ ಅಪರಾಧನ್ನು ಎಸಗಿರುತ್ತಾರೆ ಎಂದು ಸರ್ಕಾರಿ ಅಭಿಯೋಜಕರು ನಿಶ್ಸಂಸಯವಾಗಿ ರುಜುವಾತು

ಪಡಿಸುತ್ತಾರೆಯೇ?

(2) ಅದೇ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1ನೇ ಆರೋಪಿಯು ಒಂದು ದೊಣ್ಣೆಯಿಂದ ಸಾಕ್ಷಿ-02 ರವರ ಕತ್ತಿನ ಹಿಂಭಾಗಕ್ಕೆ ಹಾಗೂ ಎದೆಗೆ ದೊಣ್ಣೆಯಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟಾಗಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34 ರಡಿಯಲ್ಲಿ ಅಪರಾಧವನ್ನು ಎಸಗಿರುತ್ತಾರೆ ಎಂದು ಸರ್ಕಾರಿ ಅಭಿಯೋಜಕರು ನಿಶ್ಸಂಸಯವಾಗಿ ರುಜುವಾತು ಪಡಿಸುತ್ತಾರೆಯೇ?

(3) ಅದೇ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 3ನೇ ಆರೋಪಿಯು ಸಾಕ್ಷಿ-02 ರವರು ನೆಲದ ಮೇಲೆ ಬಿದ್ದಾಗ ಕಾಲಿನಿಂದ ಅವರ ಎದೆಗೆ ತುಳಿದು ಸಾಮಾನ್ಯ ಸ್ವರೂಪ ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಅಡಿಯಲ್ಲಿ ಅಪರಾಧವನ್ನು ಎಸಗಿರುತ್ತಾರೆ ಎಂದು ಸರ್ಕಾರಿ ಅಭಿಯೋಜಕರು ನಿಶ್ಸಂಸಯವಾಗಿ ರುಜುವಾತು ಪಡಿಸುತ್ತಾರೆಯೇ?

(4) ಯಾವ ಆದೇಶ?

**7.** ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ ಸಂಖ್ಯೆ :1 ರಿಂದ 3 : ನಕಾರಾತ್ಮಕವಾಗಿ

ಅಂಶ ಸಂಖ್ಯೆ : 4 : ಅಂತಿಮ ಆದೇಶದ ಪ್ರಕಾರ

ಈ ಕೆಳಕಂಡ ಕಾರಣಗಳಿಗಾಗಿ;-

## -:ಕಾರಣಗಳು :-

8. **ಅಂಶ ಸಂಖ್ಯೆ :-1 ರಿಂದ 3**: – ಈ ಎಲ್ಲಾ ಅಂಶಗಳು ಪರಸ್ಪರ ಸಂಬಂಧ ಹೊಂದಿರುವುದರಿಂದ ಹಾಗೂ ವಸ್ತು ಸಂಗತಿಗಳು ಪುನರಾವರ್ತನೆಯಾಗುವುದನ್ನು ತಪ್ಪಿಸಲು, ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. **ಫ್ರಾಸಾ–1** ರವರು ಪ್ರಕರಣದಲ್ಲಿ ಫಿರ್ಯಾದುದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ–2 ರವರು ತನ್ನ ತಂದೆ, ಆರೋಪಿತರು ನಮ್ಮ ಊರಿನವರು. ಈಗ್ಗೆ ಮೂರು ವರ್ಷಗಳ ಹಿಂದೆ ನಮ್ಮ ಜಮೀನಿನಲ್ಲಿ ಆರೋಪಿತರು ಕುರಿ ಮತ್ತು ಮೇಕೆಗಳನ್ನು ಮೇಯಿಸುತ್ತಿದ್ದಾಗ, ನಮಗೂ ಮತ್ತು ಆರೋಪಿತರಿಗೂ ಮಾತಿಗೆ ಮಾತು ಬೆಳೆದು ಈ ವಿಚಾರವನ್ನು ತಿಳಿಸಲು ಹೋಗಿದಾಗ ಪೊಲೀಸರು ತನ್ನಿಂದ ಒಂದು ದಾಖಲೆಗೆ ಸಹಿ ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ–1ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದೂರನ್ನು ನಿಪಿ. 1 ಎಂದು, ತನ್ನ ಸಹಿಯನ್ನು ನಿಪಿ. 1(ಎ) ಎಂದು ಗುರುತಿಸಿಕೊಂಡಿದ್ದಾರೆ. ನ್ಯಾಯಾಲಯದ ಮುಂದೆ ಇರುವ ಒಂದು ಮರದ ದೊಣ್ಣೆಯನ್ನು ಗುರುತಿಸಿಕೊಂಡಿರುವುದಿಲ್ಲ.

10. **ಫ್ರಾಸಾ-2** ರವರು ಪ್ರಕರಣದಲ್ಲಿ ಗಾಯಾಳುವಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-1 ರವರು ತನ್ನ ತಂದೆ, ಆರೋಪಿತರು ನಮ್ಮ ಊರಿನವರು. ಈಗ್ಗೆ ಮೂರು ವರ್ಷಗಳ ಹಿಂದೆ ನಮ್ಮ ಜಮೀನಿನಲ್ಲಿ ಆರೋಪಿತರು ಕುರಿ ಮತ್ತು ಮೇಕೆಗಳನ್ನು ಮೇಯಿಸುತ್ತಿದ್ದಾಗ, ನಮಗೂ ಮತ್ತು ಆರೋಪಿತರಿಗೂ ಮಾತಿಗೆ ಮಾತು ಬೆಳೆದಿರುತ್ತದೆ ತಾನು ಈ ವಿಚಾರವಾಗಿ ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಒಂದು ಮರದ ದೊಣ್ಣೆಯನ್ನು ಗುರುತಿಸಿಕೊಂಡಿರುವುದಿಲ್ಲ.

11. ನಂತರ ಅಭಿಯೋಜಕರು ಫ್ರಾಸಾ-1 ಮತ್ತು 2 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ, ಪಾಟೀ ಸವಾಲಿನಲ್ಲಿ ಮಾಡಿದ ಸಲಹೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದಾರೆ. ಹೀಗಾಗಿ ಫ್ರಾಸಾ -1 ಮತ್ತು 2 ರವರು ಪ್ರಕರಣದ ಪ್ರಮುಖ ಸಾಕ್ಷಿದಾರರಾಗಿದ್ದರೂ ಅಭಿಯೋಜನೆಗೆ ಪೂರಕ ಸಾಕ್ಷ್ಯವು ಮೂಡಿಬಂದಿರುವುದಿಲ್ಲ. ಆ ಕಾರಣದಿಂದಾಗಿ ಇವರ ಸಾಕ್ಷ್ಯವು ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗಿಲ್ಲ.

12. ಈ ಮೂಲಕ ಫ್ರಾಸಾ-1 ಮತ್ತು 2 ರವರು ಫಿರ್ಯಾದುದಾರರು ಮತ್ತು ಗಾಯಾಳುದಾರರಾಗಿದ್ದು, ಇವರು ಪ್ರಕರಣದ ಪ್ರಮುಖ ಸಾಕ್ಷಿದಾರರಾಗಿರುತ್ತಾರೆ. ಆದರೆ ಇವರು ಸಂಪೂರ್ಣವಾಗಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದು

ಪ್ರತಿಕೂಲ ಸಾಕ್ಷಿದಾರರಾಗಿ ಪರಿಣಮಿಸಿದ್ದಾರೆ. ಸದರಿ ಸಾಕ್ಷಿದಾರರು ನಿಶಾನೆ 1 ಮತ್ತು 2ಕ್ಕೆ ಪೂರಕ ಸಾಕ್ಷ್ಯವನ್ನು ನೀಡುವಲ್ಲಿ ವಿಫಲರಾಗಿದ್ದಾರೆ. ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಉಳಿದ ಸಾಕ್ಷಿದಾರರಿಗೆ ಸಮನ್ಸ್ ಕಳುಹಿಸಲು ಮನವಿ ಮಾಡಿದರೂ, ಆ ಮನವಿಯನ್ನು ತಿರಸ್ಕರಿಸಲಾಗಿದೆ. ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲದೆ ನ್ಯಾಯಾಲಯದ ಸಮಯ ವ್ಯರ್ಥವಾಗುವ ಕಾರಣದಿಂದ ಅವರನ್ನು ಕೈಬಿಡಲಾಗಿದೆ. ಹೀಗಾಗಿ ಆರೋಪಿಗಳ ವಿರುದ್ಧ ಯಾವುದೇ ಸಾಕ್ಷಿ ಲಭ್ಯವಿಲ್ಲದೆ, ಭಾ.ದಂ.ಪ್ರ.ಸಂ. 313ರ ಹೇಳಿಕೆಯನ್ನು ಕೈಬಿಡಲಾಗಿದೆ. ಮೇಲ್ಕಂಡ ಕಾರಣಗಳಿಂದ ಸರ್ಕಾರಿ ಅಭಿಯೋಜಕರು ಆರೋಪಿಗಳು ಮಾಡಿರುವ ಅಪರಾಧವನ್ನು ನಿಸ್ಸಂಶಯವಾಗಿ ರುಜುವಾತುಪಡಿಸಲು ವಿಫಲರಾಗಿದ್ದಾರೆ. ಆದ್ದರಿಂದ ಆರೋಪಿತರಿಗೆ ಸಂಶಯದ ಲಾಭ ನೀಡಿ, **ಅಂಶ ಸಂಖ್ಯೆ 1 ರಿಂದ 3ಕ್ಕೆ ನಕಾರಾತ್ಮಕವಾಗಿ ಉತ್ತರಿಸುತ್ತೇನೆ.**

**13. ಅಂಶ ಸಂಖ್ಯೆ 4** : – ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸುತ್ತೇನೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ. 248(1) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಆರೋಪಿತರ ವಿರುದ್ಧ ಆಪಾದಿಸಲ್ಪಟ್ಟ ಭಾರತೀಯ ದಂಡ ಸಂಹಿತೆ ಕಲಂ. 504, 324, 323 ಸಹವಾಚಕ ಕಲಂ.34 ರಡಿಯಲ್ಲಿ ಆರೋಪಿತರನ್ನು ನಿರ್ದೋಷಿಗಳು ಎಂದು ನಿರ್ಣಯಿಸಿ, ಅವರನ್ನು ಬಿಡುಗಡೆಗೆ ಆದೇಶಿಸುತ್ತೇನೆ.

ಆರೋಪಿತರು ಹಾಗೂ ಅವರ ಜಾಮೀನುದಾರರು ಬರೆದುಕೊಟ್ಟ ಮುಚ್ಚಳಿಕೆ ಪತ್ರಗಳನ್ನು ರದ್ದುಪಡಿಸಲಾಗಿದೆ.

ಪ್ರಕರಣದಲ್ಲಿ ನಮೂದಿಸಿರುವ ವಸ್ತು ಯಾವುದೇ ಮೌಲ್ಯಯುತವಲ್ಲದ ಕಾರಣ ಅಪೀಲು ಅವಧಿ ಮುಗಿದ ನಂತರ ನಾಶ ಪಡಿಸಲು ಆದೇಶಿಸಿದೆ.

*(ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟಿದ್ದು, ಬಳಿಕ ಅನುಲಿಪಿಯನ್ನು ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ ದಿನಾಂಕ* **27ನೇ ಜೂನ್** *2026 ರಂದು ಘೋಷಿಸಿದ್ದೇನೆ.)*

**(ಪ್ರಕಾಶ್ ಸಿ.ಡಿ )**
**ಪ್ರಧಾನ ಹಿರಿಯ ಸಿವಿಲ್ ಜಡ್ಜ್**
**ಮತ್ತು ಸಿ ಜೆ ಎಂ. ಚಾಮರಾಜನಗರ**

### * ಅನುಬಂಧ *

**1. ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ:-**

ಫ್ರಾಸಾ: 1 : ಚಂದ್ರಶೇಖರ

ಫ್ರಾಸಾ: 2 : ಮಹದೇವೇಗೌಡ

**2. ಅಭಿಯೋಜನೆಯ ಪರವಾಗಿ ಹಾಜರು ಪಡಿಸಿದ ದಾಖಲೆಗಳ ಪಟ್ಟಿಃ–**

| | | |
|---|---|---|
| ನಿಪಿಃ 1 | : | ದೂರು |
| ನಿಪಿಃ 1(ಎ) | : | ಸಹಿ |
| ನಿಪಿಃ 2 | : | ಹೇಳಿಕೆ |

**3. ಅಭಿಯೋಜನೆಯ ಪರವಾಗಿ ಗುರುತಿಸಿರುವ ಮುದ್ದೆಮಾಲು ಪಟ್ಟಿ:**

**– ಇಲ್ಲ –**

**4. ಆರೋಪಿತರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ**

**–ಇಲ್ಲ –**

**5. ಆರೋಪಿತರ ಪರವಾಗಿ ಹಾಜರು ಪಡಿಸಿದ ದಾಖಲೆಗಳ ಪಟ್ಟಿಃ**

**– ಇಲ್ಲ –**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್**
**ಮತ್ತು ಸಿ.ಜೆ.ಎಂ. ಚಾಮರಾಜನಗರ.**

Visit **ecourts.gov.in** for updates or download mobile app “**eCourts Services**” from Android or iOS